ಅನುಬಂಧ – 2

ಪ್ರೌಢಶಾಲೆಗಳು :–

1) ಸೇಂಟ್ ಜೋಸೆಫ್ ಪ್ರೌಢಶಾಲೆ, ಕಂಕನಾಡಿ, ಮಂಗಳೂರು.
2) ಭಾರತ ಮಾತಾ ಪ್ರೌಢಶಾಲೆ, ಪುನರೂರು, ಮಂಗಳೂರು ತಾಲ್ಲೂಕು.
3) ಸೇಂಟ್ ಮೇರಿಸ್ ಪ್ರೌಢಶಾಲೆ, ದುರ್ಗಾಳ, ಪುತ್ತೂರು ತಾಲ್ಲೂಕು.
4) ಪ್ರತಿಭಾ ಪ್ರೌಢಶಾಲೆ, ಪಟ್ಟೆ, ಪುತ್ತೂರು ತಾಲ್ಲೂಕು.

ಪದವಿಪೂರ್ವ ಕಾಲೇಜುಗಳ :–

1) ಸಂತ ಜಾರ್ಜ್ ಪ.ಪೂ.ಕಾಲೇಜು ನೆಲ್ಯಾಡಿ, ಪುತ್ತೂರು ತಾಲ್ಲೂಕು.
2) ನಿರಂಜನಸ್ವಾಮಿ ಪ.ಪೂ.ಕಾಲೇಜು, ಅರಂತೋಡು, ಸುಳ್ಯ ತಾಲ್ಲೂಕು.
3) ಬೆಥನಿ ಪ.ಪೂ.ಕಾಲೇಜು, ನೊಜಿಬಾಳ್ತಿಲ ಪುತ್ತೂರು ತಾಲ್ಲೂಕು.
4) ಶಾರದಾ ಪ.ಪೂ.ಕಾಲೇಜು, ಸುಳ್ಯ.
5) ತುಂಬೆ ಪ.ಪೂ. ಕಾಲೇಜು, ತುಂಬೆ, ಬಂಟ್ವಾಳ ತಾಲ್ಲೂಕು.
6) ಬಿ.ಇ.ಎಂ. ಪ.ಪೂ.ಕಾಲೇಜು, ಮಂಗಳೂರು.
7) ಶ್ರೀ ನಾರಾಯಣಗುರು ಪ.ಪೂ.ಕಾಲೇಜು, ಕಾಟಿಪಾಳ್ಯ, ಮಂಗಳೂರು ತಾಲ್ಲೂಕು.
8) ಶ್ರೀ ನಾರಾಯಣಗುರು ಪ.ಪೂ.ಕಾಲೇಜು, ಕುದ್ರೋಳಿ, ಮಂಗಳೂರು ತಾಲ್ಲೂಕು.
9) ನೆಹರು ಪ.ಪೂ. ಕಾಲೇಜು, ಅರಂತೋಡು, ಸುಳ್ಯ ತಾಲ್ಲೂಕು.

ಸಂಯುಕ್ತ ಶಾಲೆಯಾಗಿ ಪರಿವರ್ತನೆಗೊಂಡ ಶಾಲಾ ಸೌಲಭ್ಯಗಳು

304 (578) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯಿಂದ ಸಂಯುಕ್ತ ಶಾಲೆಯಾಗಿ ಪರಿವರ್ತನೆಗೊಂಡ ಶಾಲೆಗಳಿಗೆ ಪರಿವರ್ತನೆಗೊಂಡ ಶಾಲೆಗಳಿಗೆ ಕಟ್ಟಡ ಹಾಗೂ ಪರಿಕರಣಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರವು ಯಾವ ಕ್ರಮ ಕೈಗೊಂಡಿರುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಇಲಾಖೆಯಿಂದ 2009-10ನೇ ಸಾಲಿಗೆ ಈ ಕೆಳಕಂಡ ಯೋಜನೆಗಳಡಿ ಅನುದಾನವನ್ನು ಒದಗಿಸಿದೆ.

1) ಪ್ರೌಢಶಾಲಾ ಅಭಿವೃದ್ಧಿ ಯೋಜನೆಯಡಿ ಹೊಸ ಪ್ರೌಢಶಾಲಾ ಕಟ್ಟಡಗಳ ನಿರ್ಮಾಣಕ್ಕಾಗಿ 40 ಕೊಠಡಿಗಳಿಗೆ ರೂ. 200.00 ಲಕ್ಷ

2) ಪ್ರೌಢಶಾಲಾ ಕಟ್ಟಡಗಳ ನಿರ್ಮಾಣಕ್ಕಾಗಿ 59 ಕೊಠಡಿಗಳಿಗೆ ರೂ. 300.00 ಲಕ್ಷ

3) ನಗರ ಪ್ರದೇಶದ ಸರ್ಕಾರಿ ಪ್ರೌಢಶಾಲೆಗಳ ಕೊಠಡಿಗಳ ನಿರ್ಮಾಣಕ್ಕಾಗಿ 149 ಕೊಠಡಿಗಳಿಗೆ ರೂ. 794.34 ಲಕ್ಷ.

4) ಪಂಚಸೌಲಭ್ಯ ಯೋಜನೆಯಡಿ ನಗರ ಪ್ರದೇಶದ ಸರ್ಕಾರಿ ಪ್ರೌಢಶಾಲೆಗಳಿಗೆ ಶೌಚಾಲಯ ವ್ಯವಸ್ಥೆ ಕಲ್ಪಿಸಲು 49 ಶಾಲೆಗಳಿಗೆ ರೂ. 74.97ಲಕ್ಷ.

5) ಪಂಚಸೌಲಭ್ಯ ಯೋಜನೆಯಡಿ ನಗರ ಪ್ರದೇಶದ ಸರ್ಕಾರಿ ಪ್ರೌಢ ಶಾಲೆಗಳಿಗೆ ಪೀಠೋಪಕರಣಗಳ ವ್ಯವಸ್ಥೆ ಕಲ್ಪಿಸಲು ರೂ. 49.98 ಲಕ್ಷ.

6) ವಿಶೇಷ ಅಭಿವೃದ್ಧಿ ಯೋಜನೆಯಡಿ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸಲು 329 ಶಾಲೆಗಳಿಗೆ ರೂ. 1664.74ಲಕ್ಷ.

7) ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶದ ಸರ್ಕಾರಿ ಪ್ರೌಢಶಾಲೆಗಳಿಗೆ ಕೊಠಡಿ ನಿರ್ಮಾಣ ಮಾಡಲು 921 ಕೊಠಡಿಗಳಿಗೆ ರೂ. 4998.12 ಲಕ್ಷ.

ರಾಜ್ಯದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಸೌಲಭ್ಯ

305 (579) ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಪಂಚಾಯತಿಗಳು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸೌಲಭ್ಯಗಳನ್ನು ಪಡೆದಿದೆ;